**ದಿನಾಂಕ 19.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ** ವಾದಿ ಪರ ವಕೀಲರು ಕೆ ವಿ ಬಿ ವಕೀಲರಿಂದ

1. ವಾದಿ ಪ್ರಸ್ತುತ ದಾವೆಯನ್ನು ನನ್ನ ವಿರುದ್ಧ ಏನು ಪರಿಹಾರ ಕೋರಿ ಸಲ್ಲಿಸಿರುತ್ತಾರೆ ಎಂದು ಗೊತ್ತಿಲ್ಲ. ಪ್ರತಿವಾದ ಪತ್ರವನ್ನು ಸಲ್ಲಿಸಲು ನನ್ನ ವಕೀಲರು ಮಾಹಿತಿ ಕೊಟ್ಟಿರುತ್ತಾರೆ. ಸದರಿ ಪ್ರತಿವಾದ ಪತ್ರದಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿದೆ. ನಾನು ಕೊಟ್ಟ ಮಾಹಿತಿಯಂತೆ ತಕರಾರು ಬರೆದಿರುತ್ತಾರೆ. ವಾದಿಯು ವಾದ ಪತ್ರದಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. 2010 ನೇ ಸಾಲಿನಲ್ಲಿ ವಾದಿಗೆ ಬಿಸಫ್ ರವರು ಬರೆದುಕೊಟ್ಟ ಕ್ರಯ ಪತ್ರದ ವಿಚಾರ ನನಗೆ ಗೊತ್ತಿಲ್ಲ. ವಾದಿಯವರ ಹೆಸರಿಗೆ ಕ್ರಯಪತ್ರ ಆದ ವಿಚಾರ ಇವತ್ತಿನವರೆಗೂ ನಾನು ತಿಳಿದುಕೊಂಡಿಲ್ಲ ಎಂದರೆ ಸರಿ. ಬಂಟ್ವಾಳ ಕಸಬಾ ಗ್ರಾಮದ ಸರ್ವೆ ನಂಬ್ರ 137/2 ಅಂದರೆ ದಾವಾ ಸ್ವತ್ತಿನ ಪಹಣಿ ಪತ್ರಿಕೆ ನನ್ನ ತಂದೆಯ ಹೆಸರಿನಲ್ಲಿ ಇದೆ. ಯಾವ ಇಸವಿಯಲ್ಲಿ ಪಹಣಿ ಪತ್ರಿಕೆ ನನ್ನ ತಂದೆಯ ಹೆಸರಿನಲ್ಲಿದೆ ಎಂದು ನನಗೆ ಗೊತ್ತಿಲ್ಲ. ದಾವ ಸಲ್ಲಿಸುವ ಕಾಲಕ್ಕೆ ಬಂಟ್ವಾಳ ಕಸಬಾ ಗ್ರಾಮದ ಸರ್ವೆ ನಂಬ್ರ 137/2 ನನ್ನ ತಂದೆಯ ಹೆಸರಿನಲ್ಲಿತ್ತು. ದಾವ ಸಲ್ಲಿಸುವ ಕಾಲಕ್ಕೆ ಅಥವಾ ಪ್ರತಿವಾದ ಪತ್ರ ಸಲ್ಲಿಸುವ ಕಾಲಕ್ಕೆ ಇದ್ದ ಪಹಣಿ ಪತ್ರಿಕೆಯನ್ನು ನನ್ನ ವಕೀಲರಿಗೆ ಕೊಟ್ಟಿದ್ದೇನೆ. ನಿಪಿ-1 ರ ವಿವರಗಳನ್ನು ನನ್ನ ವಕೀಲರ ಬಳಿ ಕೇಳಿ ತಿಳಿದುಕೊಂಡಿಲ್ಲ. ದಾವ ಶೆಡ್ಯೂಲ್ ಸ್ವತ್ತು ಈಗಲೂ ವಾದಿಯ ಹೆಸರಿನಲ್ಲಿಯೇ ಪಹಣಿ ಪತ್ರಿಕೆ ಇದೆ ಎಂದರೆ ಸರಿಯಲ್ಲ. ವಾದಿಯ ಹೆಸರಿನಲ್ಲಿರುವ ಪಹಣಿ ಪತ್ರಿಕೆಯನ್ನು ಪ್ರಶ್ನಿಸಿ ಕಂದಾಯ ಇಲಾಖೆಗೆ ತಕರಾರು ಸಲ್ಲಿಸಿರುವುದಿಲ್ಲ.

2. ಮಂಗಳೂರಿನ ಫಾದರ್ ಮುಲ್ಲಾರ್ Charitable ಸಂಸ್ಥೆಯಿಂದ ನನಗೆ ಯಾವುದೇ ನೋಟಿಸ್ ಬಂದಿರುವುದಿಲ್ಲ. ಸದರಿ ನೋಟಿಸಿನ ಪ್ರಕಾರ ನಾನು ತಾಲೂಕು ಕಚೇರಿಯಲ್ಲಿ ಯಾವುದೇ ಮಾಹಿತಿ ಸಂಗ್ರಹಿಸಿರುವುದಿಲ್ಲ. ಸದರಿ ನೋಟಿಸಿನ ಬಗ್ಗೆ ನನ್ನ ವಕೀಲರು ಮಾಹಿತಿ ನೀಡಿರುವುದಿಲ್ಲ. ಸದರಿ ನೋಟಿಸ್ ನನಗೆ ಜಾರಿಯಾಗಿರುತ್ತದೆ ಎಂದರೆ ಸರಿಯಲ್ಲ. ಫಾದರ್ ಮುಲ್ಲಾರ್ Charitable ಸಂಸ್ಥೆಯವರು ಮನೆ ಮತ್ತು ಜಾಗವನ್ನು ಬಿಟ್ಟುಕೊಡಬೇಕೆಂದು ಸದರಿ ನೋಟಿಸಿನಲ್ಲಿ ತಿಳಿಸಲಾಗಿತ್ತು ಎಂದರೆ ಸರಿಯಲ್ಲ.

3. ಈ ಪ್ರಕರಣದಲ್ಲಿ ನಾನು ಯಾವುದೇ ಪರಿಹಾರ ಕೋರಿರುವುದಿಲ್ಲ. ದಾವಾ ಸ್ವತ್ತಿಗೆ ನನ್ನ ತಂದೆಯವರು ಭೂ ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯ ಮೇರೆಗೆ ಭೂ ನ್ಯಾಯ ಮಂಡಳಿಯು ಭೂಮಿ ಅಧಿಬೋಗ ಮಾಡಿರುತ್ತಾರೆ . ಸದರಿ ಭೂ ನ್ಯಾಯ ಮಂಡಳಿಗೆ

This is a True Copy of the Court Records Online. Authenticated @ districts.ecourtsindia.com/cnr/KADK210003732012/truecopy/order-2.pdf

ಸಲ್ಲಿಸಿದ ಮತ್ತು ಆದೇಶದ ದಾಖಲೆಗಳನ್ನು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ನನ್ನ ತಂದೆಯವರು 1978 ರಲ್ಲಿ ಮರಣ ಹೊಂದಿರುತ್ತಾರೆ. ನನ್ನ ಪ್ರಕಾರ ನನ್ನ ತಂದೆಯವರು ಜೀವಂತ ಇರುವಾಗಲೇ ನನ್ನ ತಂದೆಗೆ ಭೂಮಿ ಮಂಜೂರು ಆಗಿತ್ತು ಮತ್ತು ಪಹಣಿ ಪತ್ರಿಕೆ ಅವರ ಹೆಸರಿಗೆ ದಾಖಲಾಗಿತ್ತು ಎಂದರೆ ಸರಿ . ನನ್ನ ತಂದೆಯ ಮರಣದ ನಂತರ ಸರ್ವೆ ನಂಬ್ರ 137/2 ರ 64 ಸೆಂಟ್ಸ್ ಜಾಗದ ಪಹಣಿ ಪತ್ರಿಕೆಯನ್ನು ನನ್ನ ಹೆಸರಿಗೆ ಬದಲಾವಣೆ ಮಾಡಲು ಪ್ರಯತ್ನ ಪಟ್ಟಿಲ್ಲ. ಪಹಣಿ ಪತ್ರಿಕೆಯನ್ನು ನನ್ನ ಹೆಸರಿಗೆ ಬದಲಾಯಿಸಿ ಕೊಳ್ಳದೇ ಇರಲು ಯಾವುದೇ ನಿಖರ ಕಾರಣ ಇಲ್ಲ. ನನ್ನ ತಂದೆಗೆ ಭೂಮಿ ಮಂಜೂರಾಗಿರುವುದಿಲ್ಲ ಮತ್ತು ಪಹಣಿ ಪತ್ರಿಕೆ ದಾಖಲಾಗಿರಲಿಲ್ಲ ಎಂದರೆ ಸರಿಯಲ್ಲ.

4. ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಭೂ ನ್ಯಾಯ ಮಂಡಳಿಯ ಆದೇಶದ ವಿರುದ್ಧ ನಾನು ಮೇಲ್ಮನವಿ ಸಲ್ಲಿಸಿರುತ್ತೇನೆ. ಅಲ್ಲಿ ತಡೆಯಾಜ್ಞೆ ಆದೇಶ ಆಗಿರುತ್ತದೆ. ಸದರಿ ಮೇಲ್ಮನವಿ ಇತ್ಯರ್ಥಗೊಂಡಿರುತ್ತದೆ.

5. ನಾನು ಫಾರಂ 7ಎ ರಡಿಯಲ್ಲಿ ಭೂ ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿರುವುದಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ಸದರಿ ವಿಷಯವನ್ನು ಉಲ್ಲೇಖಿಸಿದ್ದರೆ ಅದು ಸುಳ್ಳಾಗಿರುತ್ತದೆ ಎಂದರೆ ಸರಿ . ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ನಾನು ಹೋಗಿರುವುದಿಲ್ಲ. ನಾನು ಕರ್ನಾಟಕ ಉಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ಎಲ್ಲಾ ಅರ್ಜಿಗಳು ವಾಜಾಗೊಂಡಿದೆ ಎಂದರೆ ಸರಿಯಲ್ಲ. ನನ್ನ ಪ್ರಕಾರ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ತನಿಖೆಗೆ ಬಾಕಿ ಇದೆ . ತನಿಖೆಗೆ ಬಾಕಿ ಇದೆ ಎಂದು ತೋರಿಸುವ ದಾಖಲೆಗಳನ್ನು ನನ್ನ ವಕೀಲರಿಗೆ ಕೊಟ್ಟಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು ಎಂದರೆ ಅದು ನನ್ನ ವಕೀಲರ ಬಳಿ ಇದೆ ಎಂದು ನುಡಿಯುತ್ತಾರೆ.

ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.

**(ನನ್ನ ಹೇಳಿಕೆ ಪ್ರಕಾರ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಇದೆ.**

**ಪ್ರಧಾನ ಸಿವಿಲ್ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ ಬಂಟ್ವಾಳ, ದ.ಕ.**

This is a True Copy of the Court Records Online. Authenticated @ districts.ecourtsindia.com/cnr/KADK210003732012/truecopy/order-2.pdf

www.ecourtsindia.com